5. ವಿದ್ಯಾವರ್ಧಕ ಸಂಘ, ಧಾರವಾಡ

6. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

7. ನಾಟಕ ಕರ್ನಾಟಕ ರಂಗಾಯಣ, ಮೈಸೂರು

ಸರ್ಕಾರಿ ಆದೇಶ ಸಂಖ್ಯೆ: ಸಂಕಿ 56 ಸ್ವೀಮರ 2002 ದಿ: 5.3.2003ರನ್ವಯ ಪುನರ್ ಪರಿಶೀಲಿಸಲು ಹಾಗೂ ಅಲ್ಲಿಯವರೆಗೆ ಸದರಿ ಸರ್ಕಾರಿ ಆದೇಶವನ್ನು ತಡೆಹಿಡಿಯಲು ಆದೇಶ ಹೊರಡಿಸಲಾಗಿದೆ.

ಆ. - ಇದ್ದಂತೆ -

ಇ. ಮುಂದಿನ ಹತ್ತು ವರ್ಷಗಳ ಕಾಲ ಅಷ್ಟೇ ಮೊತ್ತವನ್ನು ವಾರ್ಷಿಕ ಅನುದಾನವಾಗಿ ನೀಡಲಾಗುವುದರಿಂದ ಅಲ್ಲಿನ ಸಿಬ್ಬಂದಿಯ ಭವಿಷ್ಯಕ್ಕೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ.

ಈ. - ಇದ್ದಂತೆ -

ರಾಜ್ಯ ಸರ್ಕಾರವು ಹಳ್ಳಿಗಳ ನೈರ್ಮಲೀಕರಣಕ್ಕಾಗಿ ಹಮ್ಮಿಕೊಂಡ ಯೋಜನೆಗಳು

1488(2076) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯ ಸರ್ಕಾರವು ಹಳ್ಳಿಗಳ ಸಂಪೂರ್ಣ ನೈರ್ಮಲೀಕರಣಕ್ಕಾಗಿ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ;

ಆ. ಈ ಯೋಜನೆಗಳಡಿ ಬರುವ ಕಾಮಗಾರಿಗಳು ಯಾವುವು;

ಇ. ಈ ಕಾಮಗಾರಿಗಳಿಗಾಗಿ ನಿಗಧಿ ಪಡಿಸಿರುವ ಹಣ ಎಷ್ಟು;

ಈ. ಈ ಯೋಜನೆಗಾಗಿ ಇದುವರೆಗೂ ಬಿಡುಗಡೆ ಮಾಡಿರುವ ಹಣ ಎಷ್ಟು; (ಜಿಲ್ಲಾವಾರು ವಿವರಗಳನ್ನು ನೀಡುವುದು);

ಉ. ಇದುವರೆಗೂ ಖರ್ಚು ಮಾಡಿರುವ ಹಣ ಎಷ್ಟು; (ಜಿಲ್ಲಾವಾರು ವಿವರಗಳನ್ನು ನೀಡುವುದು)?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್. ಸಚಿವರು)

ಅ. ರಾಜ್ಯ ಸರ್ಕಾರವು ಗ್ರಾಮಗಳ ಸಂಪೂರ್ಣ ನೈರ್ಮಲೀಕರಣಕ್ಕಾಗಿ ಸ್ವಚ್ಛ ಗ್ರಾಮ ಯೋಜನೆಯನ್ನು ರಾಜ್ಯದ 1300 ಗ್ರಾಮಗಳಲ್ಲಿ ಕೈಗೊಂಡಿರುತ್ತದೆ.

ಆ. ಈ ಯೋಜನೆಯಡಿ ಬರುವ ಕಾಮಗಾರಿಗಳು ಇಂತಿವೆ: 1. ಗ್ರಾಮದ ಒಳರಸ್ತೆ ಮತ್ತು ಬೀದಿಗಳನ್ನು ಉತ್ತಮಪಡಿಸುವುದು 2. ಕೊಳೆ ಮತ್ತು ಮಳೆನೀರಿನ ಚರಂಡಿಗಳ ನಿರ್ಮಾಣ 3. ಸಾಮೂಹಿಕ ಮಿಶ್ರ ಗೊಬ್ಬರದ ಆಂಗಳವನ್ನು ನಿರ್ಮಿಸುವುದು 4. ಗ್ರಾಮದ ಎಲ್ಲಾ ಮನೆಗಳಿಗೆ ಹೊಗೆರಹಿತ ಒಲೆಗಳನ್ನು ಒದಗಿಸುವುದು ಮತ್ತು 5. ವೈಯಕ್ತಿಕ ಕೌಟುಂಬಿಕ ಶೌಚಾಲಯಗಳ: ಶಾಲಾ ಶೌಚಾಲಯಗಳ ನಿರ್ಮಾಣ.

ಇ. ರೂ. 260.00 ಕೋಟಿಗಳು

ಈ ಮತ್ತು ಉ

ವಿವರಗಳನ್ನು ಅನುಬಂಧ 1ರಲ್ಲಿ ನೀಡಲಾಗಿದೆ.

ಅನುಬಂಧ-1

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆ	ಅನುಮೋದಿತ ಸ್ವಚ್ಛಗ್ರಾಮಗಳ ಸಂಖ್ಯೆ	ಅಂದಾಜು ಮೊತ್ತ	ಜಿಲ್ಲೆಗೆ ಬಿಡುಡೆಮಾಡಿದ ಹಣ (ಫೆಬ್ರವರಿ 2003ರ ಅಂತ್ಯದ ವರೆಗೆ)	ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ	ಫಬ್ರವರಿ 2003ರ ಅಂತ್ಯದವರೆಗೆ ವೆಚ್ಚ
1	2	3	4	5	6	7
1.	ಬಾಗಲಕೋಟೆ	34	680	396.00	30	186.00
2.	ಬೆಂಗಳೂರು ಗ್ರಾ	87	1740	249.00	86	175.00
3.	ಬೆಂಗಳೂರು ನಗರ	20	400	220.00	19	182.00
4.	ಬೆಳಗಾಂ	126	2520	955.00	118	745.00
5.	ಬಳ್ಳಾರಿ	59	1180	1131.60	59	895.00
6.	ಬೀದರ್	30	600	430.00	18	147.00
7.	ಬಿಜಾಪುರ	82	1640	509.00	71	331.00
8.	ಚಾಮರಾಜನಗರ	23	460	229.00	22	195.00
9.	ಚಿಕ್ಕಮಗಳೂರು	40	800	530.99	40	392.00
10.	ಚಿತ್ರದುರ್ಗ	35	700	365.00	34	283.00
11.	ದಾವಣಗೆರೆ	51	1020	967.00	51	775.00
12.	ದಕ್ಷಿಣ ಕನ್ನಡ	39	780	453.95	39	300.00
13.	ಧಾರವಾಡ	21	420	371.00	21	275.00
14.	ಗದಗ್	32	640	461.30	32	373.00
15.	ಗುಲ್ಬರ್ಗಾ	76	1520	1008.00	63	605.00
16.	ಹಾಸನ	56	1120	864.00	56	679.00
17.	ಹಾವೇರಿ	50	1000	666.00	50	614.00
18.	ಕೊಡಗು	20	400	230.50	18	95.00
19.	ಕೋಲಾರ	49	980	481.50	28	448.00
20.	ಕೊಪ್ಪಳ	32	640	568.00	32	490.00
21.	ಮಂಡ್ಯ	60	1200	340.00	24	206.00
22.	ಮೈಸೂರು	53	1060	508.00	48	263.00
23.	ರಾಯಚೂರು	41	820	533.00	41	326.00

1	2	3	4	5	6	7
24.	ಶಿವಮೊಗ್ಗ	28	560	532.50	28	500.00
25.	ತುಮಕೂರು	39	780	539.00	37	433.00
26.	ಉಡುಪಿ	38	760	513.65	36	271.00
27.	ಉತ್ತರ ಕನ್ನಡ	70	1580	1161.00	63	820.00
	ಒಟ್ಟು	**1300**	**26000**	**15213.96**	**1164**	**11004.00**

ಆಶ್ರಯ ಯೋಜನೆ ಫಲಾನುಭವಿಗಳು

1489(1569) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ನೀಡಲಾಗುವ ಒಟ್ಟು ಮೊತ್ತವೆಷ್ಟು;

ಆ. ಇದರಲ್ಲಿ ನೀಡುವ ಸಹಾಯಧನವೆಷ್ಟು;

ಇ. ಬಾಕಿ ಹಣವನ್ನು ಎಷ್ಟು ಕಂತುಗಳಲ್ಲಿ ಮರುಪಾವತಿಸಬೇಕು ಹಾಗೂ ಕಂತುಗಳ ಮೊತ್ತವೆಷ್ಟು;

ಈ. ಈ ಬಾಕಿ ಮೊಬಲಗಿನ ಮರುಪಾವತಿಗೆ ಬಡ್ಡಿ ವಿಧಿಸಲಾಗಿದೆಯೆ;

ಉ. ವಿಧಿಸಿದರೆ ಬಡ್ಡಿ ದರವೇನು?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು)

ಅ. ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಆಶ್ರಯ ಯೋಜನೆಗಳಡಿಯಲ್ಲಿ ಫಲಾನುಭವಿಗಳಿಗೆ ನೀಡುತ್ತಿರುವ ಸಾಲ ಮತ್ತು ಸಹಾಯಧನದ ವಿವರ ಈ ಕೆಳಗಿನಂತಿದೆ:

		ಆರ್ಥಿಕ ಸಹಾಯ		
ಯೋಜನೆ	ವರ್ಗ	ಸಹಾಯ ಧನ	ಸಾಲ	ಒಟ್ಟು
ನಗರ ಆಶ್ರಯ	ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ	-	25000	25000
	ಸಾಮಾನ್ಯ			
ಗ್ರಾಮೀಣ ಆಶ್ರಯ	ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ	20000	-	20000
	ಸಾಮಾನ್ಯ	10000	10000	20000

ಇ. ಸಾಲವನ್ನು ಪ್ರತಿ ರೂ. 10000/- ಗಳ ಸಾಲಕ್ಕೆ ಪ್ರತಿ ತಿಂಗಳು ರೂ. 115 ರಂತೆ 180 ಕಂತುಗಳಲ್ಲಿ ಮರುಪಾವತಿಸಬೇಕು.

ಈ. ಹೌದು.

ಉ. ವಿಧಿಸುವ ಬಡ್ಡಿದರ ಶೇಕಡ 11.